



## ರಿಸೀವರ್ ಇಲ್ಲದೇ ಮಾತು

ಸಂತ ತುಂಬಾ ಪೆದ್ದು. ಎಲ್ಲಿ ಹೋದರೂ ಏನಾದರೂ ಎಡವಟ್ಟು ಮಾಡುಕೊಳ್ಳುತ್ತಿದ್ದ. ಹೀಗಿರುವಾಗ ಒಮ್ಮೆ ಸಂತ ದಕ್ಷಿಣ ಭಾರತದ ದೇವಾಲಯವೊಂದಕ್ಕೆ ಭೇಟಿ ನೀಡಿದ. ಅಲ್ಲಿ ಎಲ್ಲರೂ ದೇವರ ಹುಂಡಿಗೆ ಕಾಣಿಕೆ ಹಾಕಿ ಗಟ್ಟಿಯಾಗಿ ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಎಲ್ಲರನ್ನೂ ಸೂಕ್ಷ್ಮವಾಗಿ ಗಮನಿಸಿದ ಸಂತ ಮನಸ್ಸಲ್ಲೇ ಅಂದುಕೊಂಡ: 'ಎಲ್ಲರೂ ಭಾರತ ಹಿಂದುಳಿದಿದೆ ಅಂದುಕೊಳ್ಳುತ್ತಾರೆ, ಆದರೆ ಭಾರತ ಎಷ್ಟು ಮುಂದುವರಿದಿದೆ ಎಂದರೆ ಭಾರತೀಯರು ದೇವಾಲಯಗಳಲ್ಲಿ ರಿಸೀವರ್ ಇಲ್ಲದೇ ಮಾತನಾಡುತ್ತಿದ್ದಾರೆ. ಇವರೆಲ್ಲ ಯಾವಾಗ ಬುದ್ಧಿ ಕಲಿತಾರೋ...'

**ರೇಷ್ಮಾ ಶೆಟ್ಟಿ**



ಚಿತ್ರಗಳು: ಗಣೇಶ ಆಚಾರ್ಯ

## ಅದೇ ಅಂಬೊಡೆ

ಚರ್ಡಪ್ಪ ಕಾಮತರ ಹೋಟೆಲಿಗೆ ಬಂದ ಅತಿಥಿ ಸಿಡಿಮಿಡಿಗೊಂಡು, 'ನೀವು ಎಷ್ಟು ಬೇಗ ಬದಲಾಗ್ತೀರಿ ಕಾಮತರೇ? ಕಳೆದ ವಾರ ಬಂದಾಗ ಎಷ್ಟು ರುಚಿಯಾಗಿತ್ತು ಉದ್ದಿನ ಅಂಬೊಡೆ. ಗರಿಗರಿಯಾಗಿ ಇನ್ನೂ ಬೇಕೆನಿಸುವಂತಿತ್ತು. ಆದರೆ ಇವತ್ತು ತಿನ್ನೋದಕ್ಕೇ ಆಗ್ತಾ ಇಲ್ಲ' ಎಂದು ಆಕ್ಷೇಪಿಸಿದ.

ಚಹಾ ಸೋಸುತ್ತಿದ್ದ ಕಾಮತರು ಸಿಟ್ಟಿನಿಂದ, 'ನಾವೂ ಬದಲಾಗಲ್ಲ ರಾಯರೇ, ಕಾಲವೂ ಬದಲಾಗಿಲ್ಲ. ನೀವು ಸುಮ್ಮನೆ ಆರೋಪ ಹೊರಿಸ್ತಿದ್ದೀರಿ ಅಷ್ಟೆ. ನಾನೀಗ ಕೊಟ್ಟಿರೋದು ಅದೇ ದಿನದ ಅಂಬೊಡೆ. ನಿಮಗೆ ರುಚಿಯಾಗ್ಲಿಲ್ಲ ಅಂದ್ರೆ ನಾನೇನು ಮಾಡಲಿ?' ಎಂದರು!

**ಪ. ರಾಮಕೃಷ್ಣ ಶಾಸ್ತ್ರಿ**